# ಬೆಂಗಳೂರು ವಿಶ್ವವಿದ್ಯಾಲಯ

ಜ್ಞಾನಭಾರತಿ, ಬೆಂಗಳೂರು-560056

**ವಿಷಯ:** ಕಂಪ್ಯೂಟರ್ ಮತ್ತು ಮಾಹಿತಿ ವಿಜ್ಞಾನ ಇಂಜಿನಿಯರಿಂಗ್ ವಿಭಾಗ, ಯು.ವಿ.ಸಿ.ಇ ಯಲ್ಲಿ ಕಾರ್ಯನಿರ್ವಹಿಸುತ್ತಿರುವ ಐದು ಜನ ದಿನಗೂಲಿ/ಮಾಸಿಕ ಕ್ರೋಢೀಕೃತ ವೇತನದ ನೌಕರರ ಸೇವೆಯನ್ನು ಮುಂದುವರೆಸುವ ಬಗ್ಗೆ.

**ಉಲ್ಲೇಖ:** 1. 165 ನೇ ಸಿಂಡಿಕೇಟ್ ಸಭೆಯ ಅನುಮೋದನೆ ದಿನಾಂಕ: 17.08.2022.

2. ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ: 03.09.2022.

* * * * *

**ವಿವಿ ಆದೇಶ ಸಂಖ್ಯೆ: ಸಿಬ್ಬಂದಿ1/ಸಿ1/ಗು.ಆ.ತಾ.ನೇ/2007 III (2021/2022)** **ದಿನಾಂಕ: 12.09.2022**

ಸಿಂಡಿಕೇಟ್ ಪ್ರಾಧಿಕಾರದ ನಿರ್ಣಯ ದಿನಾಂಕ: 17.08.2022 ರನ್ವಯ ವಿಶ್ವವಿದ್ಯಾಲಯದ ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜಿನಲ್ಲಿ ದಿನಗೂಲಿ/ಮಾಸಿಕ ಕ್ರೋಢೀಕೃತ ವೇತನದಡಿಯಲ್ಲಿ ಕಂಪ್ಯೂಟರ್ ಮತ್ತು ಮಾಹಿತಿ ವಿಜ್ಞಾನ ಇಂಜಿನಿಯರಿಂಗ್ ವಿಭಾಗ, ಯು.ವಿ.ಸಿ.ಇ. ಯಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಕೆಳಕಂಡ ಐದು ಜನರ ಸೇವೆಯನ್ನು ಎರಡು ದಿನಗಳ ಕಾರ್ಯನಿರತ (06.06.2022 ಮತ್ತು 07.06.2022) ಬಿಡುವುಕೊಟ್ಟು **ದಿನಾಂಕ: 08.06.2022** ರಿಂದ ಜಾರಿಗೆ ಬರುವಂತೆ ಒಂದು ವರ್ಷದ ಅವಧಿಗೆ ಮುಂದುವರೆಸಿ ಮತ್ತು ಮಾಸಿಕ ವೇತನವನ್ನು ಅವರುಗಳ ಹೆಸರಿನ ಮುಂದೆ ಸೂಚಿಸಿರುವ ವೇತನ ಶ್ರೇಣಿಯ ಕನಿಷ್ಟ ವೇತನ ಮತ್ತು ರಾಜ್ಯ ಸರ್ಕಾರಿ ನೌಕರರಿಗೆ ಕಾಲಕಾಲಕ್ಕೆ ನೀಡಲಾಗುವ ತುಟ್ಟಿ ಭತ್ಯೆಯ ಶೇ. 75% ರಷ್ಟು ಮತ್ತು ಆಯಾ ಪ್ರದೇಶಕ್ಕೆ ಅನ್ವಯಿಸುವ ಮನೆ ಬಾಡಿಗೆ ಭತ್ಯೆಯ ಶೇ. 75% ರಷ್ಟು ನೀಡಲು ವಿತ್ತಾಧಿಕಾರಿಗಳಿಗೆ ಅಧೀಕರಿಸಿದೆ.

| ಕ್ರ. ಸಂ | ನೌಕರರ ಹೆಸರು | ಕನಿಷ್ಠ ವೇತನ ರೂ. | ಪ್ರಥಮವಾಗಿ ಸೇವೆಗೆ ಸೇರಿದ ದಿನಾಂಕ |
|---|---|---|---|
| 1. | ಶ್ರೀನಿವಾಸ. ಕೆ.ಎಸ್ | 33,450/- | 10.10.2001 |
| 2. | ಶ್ರೀನಿವಾಸ. ಕೆ.ವಿ | 18,600/- | 05.10.2000 |
| 3. | ಬಾಬು. ಎಲ್.ಎನ್ | 18,600/- | 14.02.2001 |
| 4. | ಹರೀಶ.ಬಿ | 18,600/- | 01.08.2002 |
| 5. | ಮಲ್ಲಿಕಮ್ಮ | 17,000/- | 05.10.2000 |

**ಸೂಚನೆ:- ದಿನಾಂಕ: 07.07.2007 ರ ಸಿಂಡಿಕೇಟ್ ಸಭೆಯ ನಿರ್ಣಯದಂತೆ ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ಇನ್ನು ಮುಂದೆ ಯಾವುದೇ ಬದಲಿ ದಿನಗೂಲಿ ನೌಕರರನ್ನು ನೇಮಿಸಿಕೊಳ್ಳಬಾರದೆಂದು ಸಿಂಡಿಕೇಟ್ ಸೂಚಿಸಿದೆ. ಅಲ್ಲದೆ ಇನ್ನು ಮುಂದೆ ಇಂತಹ ಪ್ರಸ್ತಾವನೆಗಳನ್ನು ಸಿಂಡಿಕೇಟ್ ಪರಿಗಣಿಸುವುದಿಲ್ಲ ಎಂದು ಸೂಚಿಸಿದೆ. ಹಾಗೂ ಸುಪ್ರೀಂ ಕೋರ್ಟ್ ಆದೇಶದ ಮೇರೆಗೆ ಈ ಮೇಲ್ಕಂಡ ಅಭ್ಯರ್ಥಿಗಳು ಸೇವೆ ಸಕ್ರಮಾತಿ ಬಗ್ಗೆ ಯಾವುದೇ ರೀತಿಯ ಹಕ್ಕು ಚಲಾಯಿಸಲು ಅರ್ಹರಾಗಿರುವುದಿಲ್ಲ.**

**ಷರತ್ತು ಮತ್ತು ನಿಬಂಧನೆಗಳು:**

1. ಈ ನೇಮಕಾತಿಯು ತಾತ್ಕಾಲಿಕ ನೇಮಕಾತಿಯಾಗಿರುತ್ತದೆ.
2. ಈ ನೇಮಕಾತಿಯನ್ನು ಯಾವುದೇ ಕಾರಣಕ್ಕೂ 'ಖಾಯಂ' ಎಂದು ಪರಿಗಣಿಸುವುದಿಲ್ಲ.
3. ಸದರಿ ನೌಕರರಿಗೆ ತಿಂಗಳಿಗೆ ಒಂದು ರಜೆಯಂತೆ ಒಂದು ವರ್ಷದ ಅವಧಿಗೆ 10 ಸಾಂದರ್ಭಿಕ ರಜೆಯನ್ನು ಮಾತ್ರ ಪಡೆಯಬಹುದು.
4. ಈ ನೇಮಕಾತಿ ಒಂದು ವರ್ಷದ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಯಾವುದು ಮುಂಚಿತವಾಗಿ ಕೊನೆಗೊಳ್ಳುತ್ತದೊ ಅಲ್ಲಿಯವರೆಗೆ ಮಾತ್ರ ನಂತರ ತಾನಾಗಿಯೇ ಮುಕ್ತಾಯಗೊಳ್ಳುತ್ತದೆ. ಹಾಗೂ ಇವರುಗಳ ಸೇವೆ ಅವಶ್ಯ ಎಂದಾದಲ್ಲಿ ಮುಂದಿನ ಅವಧಿಗೆ ಸಂಬಂಧಪಟ್ಟ ಅಧಿಕಾರಿಗಳು ಶಿಫಾರಸ್ಸು ಮಾಡತಕ್ಕದ್ದು.
5. ನೌಕರರ ದುರ್ನಡತೆ, ನಿರ್ಲಕ್ಷತೆ, ಉದಾಸೀನ ಮನೋಭಾವ, ಅಸಹಕಾರಗಳಿಂದ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ಕೆಲಸ ಕಾರ್ಯಗಳಲ್ಲಿ ಆರ್ಥಿಕ ನಷ್ಟ ಉಂಟಾದಲ್ಲಿ ಅವರೇ ಭರಿಸಿಕೊಡಲು ಬದ್ಧರಾಗಿರಬೇಕು.

6. ನೌಕರರು ಕರ್ತವ್ಯ ನಿರ್ವಹಿಸುತ್ತಿರುವಾಗ ಲಭ್ಯವಾಗುವ / ದೊರಕಬಹುದಾದ ಅಧಿಕೃತ ಮಾಹಿತಿಗಳನ್ನು ಗೌಪ್ಯವಾಗಿಟ್ಟು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.
7. ಈ ನೇಮಕಾತಿಯು ತಾತ್ಕಾಲಿಕ ಕ್ರೂಢೀಕೃತ ವೇತನ ಆಧಾರಿತವಾಗಿದ್ದು, ವೇತನ ಬಡ್ತಿ, ಪದೋನ್ನತಿ, ಪಿಂಚಣಿ, ರಜೆ ಸೌಲಭ್ಯ ಮುಂತಾದವುಗಳಿಗೆ ಅರ್ಹರಾಗಿರುವುದಿಲ್ಲ.
8. ಸದರಿಯವರು ವಿಶ್ವವಿದ್ಯಾಲಯದ ಅಧಿಕಾರಿಗಳು ಮತ್ತು ಸಂಬಂಧಿಸಿದ ಮುಖ್ಯಸ್ಥರುಗಳು ಸೂಚಿಸುವ ಕೆಲಸಗಳನ್ನು ಶ್ರದ್ಧಾಪೂರ್ವಕವಾಗಿ ನಿರ್ವಹಿಸಬೇಕು. ಯಾವುದೇ ನಿರ್ಲಕ್ಷದ ಮತ್ತು ಉದ್ಧಟತನದ ದೂರು ಬಂದಲ್ಲಿ ಈ ನೇಮಕಾತಿಯನ್ನು ರದ್ದುಗೊಳಿಸಲಾಗುವುದು.
9. ಈ ಸಂಚಿತ / ಕ್ರೋಢೀಕೃತ ವೇತನ ಆಧಾರಿತ ನೇಮಕಾತಿಯನ್ನು ಎರಡು ತಿಂಗಳ ನೋಟೀಸ್ ಅಥವಾ ಎರಡು ತಿಂಗಳ ಸಂಭಾವನೆ ನೀಡಿ ಎರಡೂ ಕಡೆಯಿಂದ (ವಿ.ವಿ.ನೌಕರರ) ಸೇವೆಯನ್ನು ಕೊನೆಗಾಣಿಸಬಹುದು **(Termination)**.
10. ಈ ಮೇಲಿನ ಪಟ್ಟಿಯಲ್ಲಿರುವ ದಿನಗೂಲಿ ನೌಕರರಿಗೆ 60 ವರ್ಷ ವಯಸ್ಸಾದ ತರುವಾಯ ಸದರಿಯವರುಗಳ ದಿನಗೂಲಿ ಸೇವೆಯು ಕೊನೆಗೊಳ್ಳುವುದು.
11. ಒಂದು ವರ್ಷ ಸೇವಾವಧಿಯಲ್ಲಿ ಅನಧಿಕೃತವಾಗಿ 7(ಏಳು) ದಿನಗಳಿಗಿಂತ ಹೆಚ್ಚಾಗಿ ಗೈರುಹಾಜರಾದ ಪಕ್ಷದಲ್ಲಿ ಗುತ್ತಿಗೆ ನೇಮಕಾತಿಯನ್ನು ರದ್ದುಗೊಳಿಸಲಾಗುವುದು. ಆದರೆ ಯಾವುದೇ ಸದರಿ ನೌಕರರು ಅನಾರೋಗ್ಯ ನಿಮಿತ್ತ / ಅನಿವಾರ್ಯ ಕಾರಣ ನಿಮಿತ್ತ ಸಂಬಂಧ ಪಟ್ಟ ನಿಯಂತ್ರಣಾಧಿಕಾರಿಗಳಿಂದ ಪೂರ್ವಾನುಮತಿ / ಶಿಫಾರಸ್ಸಿನ ಮೇರೆಗೆ 7 ದಿನಗಳಿಗಿಂತ ಹೆಚ್ಚು ಗೈರುಹಾಜರಿಯ ಅವಧಿಯನ್ನು ಸಂಬಳ ರಹಿತ ದಿನಗಳು ಎಂದು ಪರಿಗಣಿಸಬಹುದಾಗಿದೆ. ಈ ರೀತಿಯ ಸಕಾರಣ ಗೈರುಹಾಜರಿ ದಿನಗಳ ನಂತರ ಮುಂದೆ ಕರ್ತವ್ಯಕ್ಕೆ ಹಾಜರಾದಲ್ಲಿ ಆ ದಿನಾಂಕದಿಂದ ನಿಗಧಿತ ಮಾಸಿಕ ವೇತನವನ್ನು ಲೆಕ್ಕಾಚಾರ ಮಾಡಿ ಬಟವಾಡೆ ಮಾಡಬಹುದಾಗಿದೆ.

ಮೇಲ್ಕಂಡ ಮಾಸಿಕ ಕ್ರೂಢೀಕೃತ ಸಂಚಿತ ವೇತನದ ವೆಚ್ಚವನ್ನು ಆಯವ್ಯಯ ಅಂದಾಜು ಭಾಗ -04-17-26-069-356- ತಾತ್ಕಾಲಿಕ ಸಿಬ್ಬಂದಿ ಸಂಬಳ -127-2022-2023 ರಿಂದ ಭರಿಸಬಹುದು.

**ಆದೇಶದ ಮೇರೆಗೆ,**

ಕುಲಸಚಿವರು

ಗೆ,

1. ಮುಖ್ಯಸ್ಥರು, ಕಂಪ್ಯೂಟರ್ ಮತ್ತು ಮಾಹಿತಿ ವಿಜ್ಞಾನ ಇಂಜಿನಿಯರಿಂಗ್ ವಿಭಾಗ, ಯು.ವಿ.ಸಿ.ಇ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
2. ವಿತ್ತಾಧಿಕಾರಿಯವರು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

**ಪ್ರತಿಗಳು:**

1. ಕುಲಪತಿಯವರು/ ಕುಲಸಚಿವರು/ ಕುಲಸಚಿವರು (ಮೌಲ್ಯಮಾಪನ)/ ವಿತ್ತಾಧಿಕಾರಿಯವರ ಆಪ್ತಕಾರ್ಯದರ್ಶಿಗಳು/ ಆಪ್ತಸಹಾಯಕರು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
2. ಲೆಕ್ಕಪರಿಶೋಧಕರು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
3. ಕಛೇರಿ / ರಕ್ಷಾಕಡತ ಪ್ರತಿ.